ಮೈಸೂರ ಗೆಜೆಟ್.

ನಂ. 17 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1887.

ಬೆಂಗಳೂರು, ಶನಿವಾರ, ಏಪ್ರಿಲ್ ತಾ|| 30, ಸನ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೆ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯೂಟೆ ಕಮ್ಮಿಷನರುಗಳು, ಸಬ್‌ಆರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮಂ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—1887ನೇ ಫಿಬ್ರವರೀ ತಿಂಗಳಲ್ಲಿ ನಡದ ಮೈಸೂರು ಲೋಕಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಪಟ್ಟಿ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 30ನೇ ಮಾರ್ಚೀ 1887.

ಕ್ಯಾಂಪ್ ನಂ. 2287.—ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಜಾರೀಲಿರುವ ಮಲ್‌ನಾಡು ತಾಲ್ಲೂಕುಗಳ ತರಗತಿಯನ್ನ ಅನುಸರಿಸಿ ಸನ್ 1886ನೇ ಇಸವಿ ಮೇ 20ನೇ ಮಕ್ತುಂ 77ನೇ ನಂಬರ್ ಇಸ್ತಿಹಾರಿನಲ್ಲಿ ನಮೂದಿಸಿದ ಮಲ್‌ನಾಡು ತಾಲ್ಲೂಕುಗಳ ಪಟ್ಟಿಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಪೈಕಿ ಶಿಕಾರಿಪುರ ತಾಲ್ಲೂಕು ಶೇರಿಸಲ್ಪಟ್ಟಿರುತ್ತದೆ.

ತಾರೀಖು 2ನೇ ಏಪ್ರಿಲ್ 1887.

ಕ್ಯಾಂಪ್ ನಂ. 6.—1885ನೇ ಇಸವಿ ಮಾರ್ಚೀ 24ನೇ ಮಕ್ತುಂ 242ನೇ ನಂಬರ್ ಇಸ್ತಿಹಾರಿನಲ್ಲಿ ಕಾಫಿ ಜಮೀನಿಗಾಗಿ ಎಕರೆ ಮೇಲೆ ಕಂದಾಯ ತರಾವು ಮಾಡುವ ಬಗ್ಗೆ ನಿಬಂಧನೆಗಳು ವಿಧಿಸಲ್ಪಟ್ಟಿರುತ್ತವೆಯಷ್ಟೆ, ಆ ಇಸ್ತಿಹಾರ್‌ನಾಮೆಯ 10ನೇ ಕಲಂ ಅನುಸರಿಸಿ ಹಲ್ಲುಗಾವಲ್ ಕಂದಾಯಕ್ಕೆ ಇನ್ನು ಮೇಲೆ ಕೊಡಲ್ಪಡುವ ಜಮೀನುಗಳ ಕವುಲ್‌ಗಳಲ್ಲಿ ಮೇಲ್‌ಕಂಡ ಇಸ್ತಿಹಾರ್‌ನಾಮೆಯ

6ನೇ ಕಲಮಿನಲ್ಲಿ ನಮೂದಿರುವ ಸರ್ಕಾರಕ್ಕೆ ವುಳಿಕೊಳ್ಳಲ್ಪಟ್ಟ ಮರಗಳ ಪಟ್ಟಿಗೆ ಬಿಳೀಮತ್ತಿ ವ ಕರೀಮತ್ತಿ ಮರಗಳು ಜೇರಿಸಲ್ಪಡತಕ್ಕದ್ದು.

ಕ್ಯಾಂಪ್ ನಂ. 8.—ಕಾಫಿ ಸಾಗುವಳಿಗೋಸ್ಕರ ಕೊಡಲ್ಪಟ್ಟ ಜಮ್ಮಿಗಳ ಫೈಸಲಾತಿಗೆ ಸಂಬಂಧಪಟ್ಟ 1885ನೇ ಇಸವಿ ಮಾರ್ಚಿ 24ನೇ ಮಳ್ಳಂ 242ನೇ ನಂಬರ್ ಇಸ್ತಿಹಾರ್‌ನಾಮೆಯ 5ನೇ ಪ್ಯಾರಾ (೨) ಕ್ಲಾಜ್ ಅನುಸರಿಸಿ ಇದರಡೀಕಂಡ ಸೀನಿಯರೇಜ್ ಯಾನೆ ತೀರ್ವೆ ದರಗಳು, ಕಾಫಿ ಜಮ್ಮಿಗಳಲ್ಲಿ ಬೆಳೆಯುವ ಸರ್ಕಾರಕ್ಕೆ ಉಳಿಸಿಕೊಳ್ಳಲ್ಪಟ್ಟ ನಾನಾ ಜಾತಿ ಮರಗಳಿಗೆ, ಅವು ಹಿಡುವಳೀದಾರನ ವಾಸ್ತವ್ಯವಾದ ಸ್ವಂತ ಕೆಲಸಕ್ಕೆ ಅಲ್ಲದೆ ಅನ್ಯಥಾ ಕಡಿಯಲ್ಪಟ್ಟಾಗ ವಸೂಲ್ಮಾಡಲ್ಪಡತಕ್ಕದ್ದೆಂದು ಗೊತ್ತುಮಾಡಲ್ಪಟ್ಟಿರುತ್ತೆ:—

ಕಡಿಯಲ್ಪಟ್ಟ ದರ ಮರ 1ಕ್ಕೆ ರೂಪಾಯಿ.			ಕಡಿಯಲ್ಪಟ್ಟ ದರ ಮರ 1ಕ್ಕೆ ರೂಪಾಯಿ.		
ತೇಗ	..	8	ಹೊನ್ನೆ	..	3
ಪೂಣ	..	6	ಜಾಲಿ	..	3
ಕರೀಮರ	..	8	ನಂದಿ	..	3

ತಾರೀಖು 15ನೇ ಏಪ್ರೆಲ್ 1887.

ನಂ 4.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀಮಾಡಲ್ಪಟ್ಟಿರುವ ಈಕೆಳಗೆಕಂಡ ಜೋಡೀ ಗ್ರಾಮವು ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಿಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ ೨೫ ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಇಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇವೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮೆವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮ್ಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನ್ಯೂನಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
1	2	3	4	5	6	7	8	9	10
ಶಿವಮೊಗ್ಗ	ಹೊನ್ನಾಳಿ	ಹೊಳೆಬೆಲೂರು.	ಕಂದವಾರ	ಕೊಂಡಜಗಲೂರು ವ ಇತರ 25 ಮಂದಿ	ಯ. ಗುಂ. ಗ 404 4 0	ರೂ. ಆ ಪೈ. 678 3 1	ರೂ. ಆ ಪೈ. 312 0 0	ರೂ. ಆ. ಪೈ. 259–14–0	ಮುಂದಿನ ತಿಂಗಳು ತಾರೀಖು 26ರಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್‌ರೂಬರು.
								ಮತ್ತು ಹರಾಜು ತಾರೀನವರಿಗೆ ಬಡ್ಡೀ ವಗೈರೆ	

ತಾರೀಖು 12ನೇ ಏಪ್ರೆಲ್ 1887.

ಕ್ಯಾಂಪ್ ನಂ. 73.—ಷಿಕಾರಿಪುರ ತಾಲ್ಲೂಕು ಅಮಲ್‌ದಾರ್ ಯೆ. ವೆಂಕಟರಾಯರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 75.—ಯಿದರಡೀ ಕಂಡ ಅಮಲ್‌ದಾರರುಗಳ ವರ್ಗಾವರ್ಗಿಗಳು ಹುಕ್ಕುಂ ಮಾಡಲ್ಪಟ್ಟಿರುತ್ತವೆ:—

ನಾಗೇಶರಾಯರಿಗೆ, ಹೊನ್ನಾಳಿ ತಾಲ್ಲೂಕಿನಿಂದ ಷಿಕಾರಿಪುರ ತಾಲ್ಲೂಕಿಗೆ.

ಲಿಂಗಪ್ಪನವರಿಗೆ, ಸಾಗರ ತಾಲ್ಲೂಕಿನಿಂದ ಹೊನ್ನಾಳಿ ತಾಲ್ಲೂಕಿಗೆ.

ಎ. ವೆಂಕಟರಾಯರಿಗೆ, ಷಿಕಾರಿಪುರ ತಾಲ್ಲೂಕಿನಿಂದ ಸಾಗರ ತಾಲ್ಲೂಕಿಗೆ—ರಜಾದಿಂದ ವಾಪಸ್ ಬಂದವಡನೆ ಹಾಜರಾಗತಕ್ಕದ್ದು.

2. ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಆಫೀಸ್ ಹೆಡ್ ಅರ್ಕಾಟೆಂಟ್ ಜಿ. ಕೊಯಲ್ಲೊಯವರಿಗೆ, ವೆಂಕಟರಾಯರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಸಾಗರ ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತೆ.

ತಾರೀಖು 15ನೇ ಏಪ್ರೆಲ್ 1887.

ಕ್ಯಾಂಪ್ ನಂ. 109—ಸದರ್ ಡಿಸ್ಟ್ರಿಲೀರಿ ಹೆಡ್ ಸೂಪರ್‌ವೈಜರ್ ಮೆ॥ ಜೆ. ಜಿ. ಮೆಕ್‌ಡೊನೆಲ್‌ಯವರು, ಆಬ್ಕಾರಿ ವ ಯಿಕ್ಸೈಸ್ ಇಲಾಖೆಯಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಗೆ ಸ್ಪೆಷಲ್ ಅಸಿಸ್ಟೆಂಟರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 117.—ಬೇಲೂರು ತಾಲ್ಲೂಕು ಅಮಲ್‌ದಾರ್ ಕೇಶವಯ್ಯಂಗಾರ್ರಿಗೆ, 1886ನೇ ಇಸವಿ ಜೂರ್ 28ನೇ ಮೊರ್ಕುಂ 372ನೇ ಕ್ಯಾಂಪ್ ನಂಬರ್‌ಉಳ್ಳ ದಿರ್ವಾರವರ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ 20 ದಿವಸಗಳ ಪ್ರಿವಿಲೀಜ್ ರಜಾವನ್ನ ಉಪಯೋಗಿಸಿಕೊಳ್ಳುವ ಬಗ್ಯೆ ಆಪ್ಪಣೆ ಕೊಡಲ್ಪಟ್ಟಿರುತ್ತೆ.

ತಾರೀಖು 18ನೇ ಏಪ್ರೆಲ್ 1887.

ಕ್ಯಾಂಪ್ ನಂ. 151.—1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷ್ಟ ಆಕ್ಟಿನ 69ನೇ ಸೆಕ್ಷನ್ ಅನುಸರಿಸಿ ಮೈಸೂರು ದೇಶದ ರಿಜಿಸ್ಟ್ರೇಷ್ಟ ಇನ್ಸ್‌ಪೆಕ್ಟರ್ ಜನರಲ್‌ಯವರಿಂದ ಮಾಡಲ್ಪಟ್ಟ ರಿಜಿಸ್ಟ್ರೇಷ್ಟ ರೂಲ್‌ನ 83ನೇ ಕಲಮಿಗೆ ಕೇರಜೇಕಾದ ಯಿದರಡೀ ಕಂಡ ಜಾಸ್ತಿ ಅಂಶಗಳು, ಮಂಜೂರ್ರಾಡಲ್ಪಟ್ಟು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುತ್ತೆ:—

"83. A. ರಿಜಿಸ್ಟ್ರಾರವರಿಂದ 76ನೇ ಸೆಕ್ಷನ್ ಅನುಸರಿಸಿ IIನೇ ನಂಬರ್ ಬುಕ್ಕಿನಲ್ಲಿ ಪ್ರತಿವಾಹೆಯಲ್ಲಿ ಮಾಡಲ್ಪಟ್ಟ ಖತಾಯಿತಿಗಳ ನಕಲುಗಳು, ರಿಜಿಸ್ಟ್ರೀ ವ ಸಬ್ ರಿಜಿಸ್ಟ್ರೀ ಆಫೀಸುಗಳ ಮಾಹೇವಾರಿ ಲಿಖ್ತುಗಳೊಂದಿಗೆ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸಿಗೆ ಕಳುಹಿಸಲ್ಪಡತಕ್ಕದ್ದು."

ತಾರೀಖು 19ನೇ ಏಪ್ರಿಲ್ 1887.

ನಂ. 5.—ಅಸಿಸ್ಟೆಂಡ್ ಸರ್ಜಿಯನ್ ಯಿ. ಆರ್. ವೈದ್ಯನಾಥಶಾಸ್ತ್ರಿ, ಯಂ. ಯಿ., ಯಂ. ಬಿ., ಸಿ. ಯಂ., ಯವರಿಗೆ 1887ನೇ ಇಸವಿ ಮಾರ್ಚಿ 4ನೇ ಮಕ್ಕಂ ಕ್ಯಾಂಪ್ ನಂಬರ್ 1708ನೇ ಈ ಆಫೀಸ್ ಇಸ್ತಿಹ ನಾಮೆಯಿಂದ ಕೊಡಲ್ಪಟ್ಟ 15 ದಿವಸಗಳ ಪ್ರಿವಿಲೀಜ್ ರಜಾ ಅವರ ಖಾಯಿಷ್ ಪ್ರಕಾರ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 21ನೇ ಏಪ್ರಿಲ್ 1887.

ನಂ 6.—ಮೈಸೂರು ಗವರ್ನಮೆಂಟ್ ಕಾಂಪ್ಟ್ರೋಲರಾದ ಮೆ॥ ಯಿ. ರಂಗಸ್ವಾಮಯ್ಯಂಗಾರ್ಯವರು, ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಮೆ॥ ರಂಗಸ್ವಾಮಯ್ಯಂಗಾರ್ಯವರು ರಜಾದ ಮೇಲಿರುವಕಾಲದಲ್ಲಿ, ದಿವಾನರವರ ಅಂಡರ್ ಸೆಕ್ರಟೇರಿಯವರು ಅವರ ಇತರ ಕೆಲಸ ಗಳೊಂದಿಗೆ ಹುಜೂರು ಟ್ರೆಜರಿ ಚಾರ್ಜು ವಹಿಸಿರತಕ್ಕದ್ದು; ಮತ್ತು ಕಾಂಪ್ ಟ್ರೋಲರವರ ಚೀಫ್ ಅಸಿಸ್ಟೆಂಟರಾದ ಮೆ॥ ಹೆಚ್. ಈಗಲ್ಸ್ ಯವರು ಕಾಂಪ್ಟ್ರೋಲರವರ ಆಫೀಸಿನ ಚಾಲ್ತಿ ಕೆಲಸದ ಚಾರ್ಜನ್ನು ವಹಿಸಿರತಕ್ಕದ್ದು.

ತಾರೀಖು 22ನೇ ಏಪ್ರಿಲ್ 1887.

ನಂ. 7.—ಮೂರನೇ ಗ್ರೇಡ್ ಡೆಪ್ಯುಟಿ ಕಮ್ಮಿಷನರ್ ಮೆ॥ ಪಿ. ಆರ್. ಕೃಷ್ಣಮೂರ್ತಿಯವರು, ಮೃತಪಟ್ಟ ಮೆ॥ ಅಬ್ದುಲ್ ಖಾದರ್ ಖಾನ್‌ಬಹದೂರ್‌ಯವರಿಗೆ ಬದಲಾಗಿ, ಯರಡನೇ ಗ್ರೇಡ್ ಡೆಪ್ಯುಟಿ ಕಮ್ಮಿಷನರಾಗಿ ಬಡ್ತಿಮಾಡಲ್ಪಟ್ಟಿರುತ್ತಾರೆ.

ನಾಲ್ಕನೇ ಗ್ರೇಡ್ ಡೆಪ್ಯುಟಿ ಕಮ್ಮಿಷನರ್ ಮೆ॥ ವಿ. ಪಿ. ಮಾಧವರಾಯರವರು, ಮೂರನೇ ಗ್ರೇಡ್ ಡೆಪ್ಯುಟಿ ಕಮ್ಮಿಷನರಾಗಿ ರತಕ್ಕದ್ದು.

ಈ ಬಡ್ತಿಗಳು ಸರ್ 1887ನೇ ಇಸವಿ ಫಿಬ್ರವರೀ 24ನೇ ವರ್ಕಂ ಲಾಗಾಯತು ಜ್ಯಾರಿಯಲ್ಲಿ ಬರತಕ್ಕವು.

ನಾಲ್ಕನೇ ಗ್ರೇಡ್ ಡೆಪ್ಯುಟಿ ಕಮ್ಮಿಷನರ್ ಮೆ॥ ಟಿ. ಆನಂದರಾಯರವರು, 1887ನೇ ಇಸವಿ ಏಪ್ರಿಲ್ 1ನೇ ಮಕ್ಕಂ ಲಾಗಾಯತು, ಮೂರನೇ ಗ್ರೇಡ್ ಡೆಪ್ಯುಟಿ ಕಮ್ಮಿಷನರಾಗಿರತಕ್ಕದ್ದು.

ಮೆ॥ ಟಿ. ಆನಂದರಾಯರವರು, ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ—ಕೂಡ್ಲೆ ಉದ್ಯೋಗದ ಮೇಲೆ ಹೋಗತಕ್ಕದ್ದು.

ದಿವಾನರವರ ಅಂಡರ್ ಸೆಕ್ರಟೇರಿಯವರಾದ ಮೆ॥ ಏ. ಆರ್. ಪೂರ್ಣಯ್ಯನವರು, ಅಜಮಾಯಿಷಿ ತರೀಕ್ ಹಾಸನ ಡಿಸ್ಟ್ರಿಕ್ಟಿನ ನಾಲ್ಕನೇ ಗ್ರೇಡ್ ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಾಗಿ ಸಬ್ ಪ್ರೋಟೆಂ ತರೀಕ್ ನೊಕರರ್ ಮಾಡಲ್ಪಟ್ಟಿರುತ್ತಾರೆ. ಅವರ ಕೆಲಸದ ಚಾರ್ಜ್ ವಪ್ಪಿಸಿದ ನಂತರ ನೊಕರರ್ ಉದ್ಯೋಗದ ಮೇಲೆ ಹೋಗತಕ್ಕದ್ದು.

ಯರಡನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಸಿ. ಮಾದಯ್ಯನವರು ದಿವಾನರವರ ಆಫೀಸಿನಲ್ಲಿ ಅಂಡರ್ ಸೆಕ್ರಟೇರಿಯಾಗಿರತಕ್ಕದ್ದು—ಅವರ ಕೆಲಸದ ಚಾರ್ಜು ವಪ್ಪಿಸಿದ ನಂತರ ಉದ್ಯೋಗದ ಮೇಲೆ ಹೋಗತಕ್ಕದ್ದು.

ಮೆ॥ ಅಬ್ದುಲ್‌ರಹಮಾನ್‌ಯವರು ಮೈಸೂರು ಟವ್ನ್ ಮಾಜಿಸ್ಟ್ರೇಟ್ ವ ಮೈಸೂರು ಮ್ಯುನಿಸಿಪಾಲಿಟಿ ಯಕ್ಸ್ ಅಫಿಷಿಯೋ ವೈಸ್ ಪ್ರೆಸಿಡೆಂಟರಾಗಿರತಕ್ಕದ್ದು—ಕೂಡ್ಲೆ ಉದ್ಯೋಗದ ಮೇಲೆ ಹೋಗತಕ್ಕದ್ದು.

ಅಫಿಷಿಯೇಟಿಂಗ್ ಅ. ಕಮ್ಮಿಷನರ್ ಮೆ॥ ಜೆ. ಜಬ್ಲ್ಯೂ. ನೈಟ್‌ಯವರು ಮೈಸೂರಿಂದ ತಿವಮೊಗ್ಗಾ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ—(ಮೈಸೂರು ಡಿ॥ ಕಮ್ಮಿಷನರವರ ಅಪ್ಪಣೆ ಅನುಸರಿಸಿ ಉದ್ಯೋಗದ ಮೇಲೆ ಹೋಗತಕ್ಕದ್ದು.)

ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಡಿ. ನಾಮಕಲಿರಾಯರು, ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟು ಕ್ಲೋಸ್ ಟೆ ಸಬ್ ಡಿವೀಜ್ ಚಾರ್ಜಿಗೆ ನಿಯಮಿಸಲ್ಪಟ್ಟಿರುತ್ತಾರೆ. ಅವರು ರಜಾದಿಂದ ವಾಪಸು ಬಂದನಂತರ ಉದ್ಯೋಗದ ಮೇಲೆ ಹೋಗತಕ್ಕದ್ದು.

ಹುಕ್ಕುಂ ಬಮೋಜೀಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಟೇರಿ.